ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-19 ಸಂಚಿಕೆ-5 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ದೇವಸ್ಥಾನದಲ್ಲಿ ಕಿರುನವರಾತ್ರಿ–ದುರ್ಗಾನಮಸ್ಕಾರ





ತಾ.06-04-2019ನೇ ಶನಿವಾರ ಕಿರುನವರಾತ್ರಿ ಪೂಜೆಗಳು ಶ್ರೀ ಶಾರದಾ ದೇವಸ್ಥಾನದಲ್ಲಿ ಆರಂಭವಾಯಿತು. ಚಾಂದ್ರಮಾನ ಪದ್ಧತಿಯ ಪ್ರಕಾರ ಚೈತ್ರಮಾಸ ಶುಕ್ಲಪಕ್ಷದ ಪ್ರಥಮ ದಿನವಾದ ಯುಗಾದಿಯಂದು ಆರಂಭಗೊಂಡು ಒಂಬತ್ತು ದಿನಗಳಲ್ಲಿ ವಸಂತಕಾಲದಲ್ಲಿ ಸಲ್ಲುವ ಪೂಜೆಯು ದೇವಿಗೆ ವಿಶೇಷವಾಗಿವೆ. ಈ ಒಂಬತ್ತು ದಿನಗಳನ್ನು ಕಿರುನವರಾತ್ರಿ ಎಂದೂ ಕರೆಯುತ್ತಾರೆ. ನವರಾತ್ರಿ ಕಳೆದು ವಿಜಯದಶಮಿಯಂದು ಚಂಡಿಕಾಯಾಗವನ್ನು ನೆರವೇರಿಸುವಂತೆ, ಕಿರುನವರಾತ್ರಿಯ ಕೊನೆಯ ದಿನವಾದ ರಾಮನವಮಿಯಂದು ಸಾಮೂಹಿಕ ದುರ್ಗಾನಮಸ್ಕಾರವನ್ನು ನೆರವೇರಿಸುವ ಕ್ರಮವನ್ನು ಉಡುಪಿಯ ನಮ್ಮ ಸಂಘದಲ್ಲಿ ಅನೇಕ ವರ್ಷಗಳಿಂದ ಪಾಲಿಸುತ್ತಿದ್ದೇವೆ. ಈ ವರ್ಷವೂ ಕಿರುನವರಾತ್ರಿಯ ಒಂಬತ್ತು ದಿನಗಳಲ್ಲಿಯೂ ಶ್ರೀ ಶಾರದಾ ದೇವಸ್ಥಾನದಲ್ಲಿ ಶಾರದೆಯನ್ನು ವಿಶೇಷವಾಗಿ ಅಲಂಕರಿಸಿ ದಿನನಿತ್ಯವೂ ಪಾರಾಯಣ ಭಜನೆಗಳೊಂದಿಗೆ ಪೂಜಿಸಲಾಗುತ್ತಿತ್ತು. ನೂರಾರು ಸಮಾಜಬಾಂಧವರು ಹಾಗೂ ಭಕ್ತರು ಈ ದಿನಗಳಲ್ಲಿ ವಿಶೇಷವಾಗಿ ಪೂಜೆಯನ್ನು ಪ್ರಾಯೋಜಿಸಿ ಕೃತಾರ್ಥರಾದರು. ಕಿರುನವರಾತ್ರಿಯ ಅಂಗವಾಗಿ ತಾ.13-04-2019ರ ಶನಿವಾರ ಸಂಜೆ ಸಂಘದ ವತಿಯಿಂದ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ನೆರವೇರಿತು. ಸಂಜೆ ಐದು ಗಂಟೆಯಿಂದ ಮಂಡಲರಚನೆಯೊಂದಿಗೆ ಕಾರ್ಯಕ್ರಮಗಳು ಆರಂಭವಾದವು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಸ್ವಾಧ್ಯಾಯ ತಂಡದವರು ಪಾರಾಯಣವನ್ನು ನೆರವೇರಿಸಿದರು. ಮಹಿಳಾವೇದಿಕೆಯಿಂದ ಭಜನಾ ಕಾರ್ಯಕ್ರಮ ನೆರವೇರಿತು. ಶ್ರೀಮತಿ ಪ್ರೀತಿ ರಾವ್ ಹಾಗೂ ಡಾ। ಸಂತೋಷ್ ರಾವ್ ದಂಪತಿಗಳು ಪೂಜಾಕತೃಗಳಾಗಿ ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ರಾತ್ರಿ ಒಂಬತ್ತು ಗಂಟೆಗೆ ಮಹಾಪೂಜೆ ನೆರವೇರಿತು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು. ಇನ್ನೂರಕ್ಕೂ ಹೆಚ್ಚು ಸಮಾಜಬಾಂಧವರು ಪಾಲ್ಗೊಂಡಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಯು. ಅರವಿಂದ ಕುಮಾರ್ ಮತ್ತು ಕೋಶಾಧಿಕಾರಿ ಶ್ರೀ ಬಿ.ಜಯರಾಮ ರಾವ್‌ರವರು ಕಾರ್ಯಕ್ರಮಗಳ ಉಸ್ತುವಾರಿ ನಡೆಸಿದರು.

## ಪಾದೆಬೆಟ್ಟಿನಲ್ಲಿ ವೈದಿಕ ಶಿಬಿರ



ವೇಗವಾಗಿ ಮುಂದುವರಿಯುತ್ತಿರುವ ಈ ಕಂಪ್ಯೂಟರ್ ಯುಗದಲ್ಲಿ ನಮ್ಮ ಸಂಪ್ರದಾಯ, ಸಂಸ್ಕಾರಗಳು ನಶಿಸಿ ಹೋಗುತ್ತಿವೆ. ನಮ್ಮ ಬ್ರಾಹ್ಮಣತ್ವವನ್ನು ಉಳಿಸಿಕೊಳ್ಳಲು ಯುವಪೀಳಿಗೆಗೆ ಅದರಲ್ಲೂ ಮಕ್ಕಳಿಗೆ ತರಬೇತಿ ಕೊಡುವುದು ಅತ್ಯಗತ್ಯ. ಅದರಂತೆ ಶೃಂಗೇರಿಯ ಜಗದ್ಗುರುಗಳ ಶುಭಾಶೀರ್ವಾದಗಳೊಂದಿಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀಯವರ ಮಾರ್ಗದರ್ಶನದಲ್ಲಿ ಶ್ರೀ ಹೆಜಮಾಡಿ ಶ್ರೀ ಕೃಷ್ಣರಾಜ ಭಟ್ ಇವರ ನೇತೃತ್ವದಲ್ಲಿ ನಮ್ಮ ಸಮಾಜದ ವಟುಗಳಿಗೆ ಸಂಧ್ಯಾವಂದನೆ, ಪೂಜಾ ವಿಧಾನ, ಮೊದಲಾದ ವೈದಿಕ ತರಬೇತಿಗಳನ್ನು ನೀಡಲಾಗುತ್ತಿದೆ.

ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಎಪ್ರಿಲ್ 11ರಿಂದ ಎಪ್ರಿಲ್ 17ರ ವರೆಗೆ ವೈದಿಕ ಶಿಬಿರವು ನಡೆಯಿತು. ಸುಮಾರು 25 ವಟುಗಳು ಇದರಲ್ಲಿ ಭಾಗವಹಿಸಿದರು. ಮೂರು ವಿಭಾಗಗಳಲ್ಲಿ ನಡೆದ ಅಧ್ಯಯನದಲ್ಲಿ ಶ್ರೀ ಕೃಷ್ಣರಾಜ ಭಟ್, ಹೆಜಮಾಡಿ, ಶ್ರೀ ರಾಜಶೇಖರ್ ರಾವ್, ಎರ್ಮಾಳಿನ ಶ್ರೀ ನಾಗರಾಜ ಭಟ್

(3ನೇ ಪುಟಕ್ಕೆ...)

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436
DEEPA ENTERPRISES
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಈ ತಿಂಗಳು ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಆಚರಿಸುವ ತಿಂಗಳು. ಸನಾತನ ಧರ್ಮದ ಉದ್ಧಾರಕರಾಗಿ, ಭರತಖಂಡದ ಸಮಗ್ರತೆಯ ಹರಿಕಾರರಾಗಿ ಅವತರಿಸಿದ ಈ ಅವತಾರಪುರುಷರು ಪ್ರಾತಃಸ್ಮರಣೀಯರು. ಅವರ ಜನ್ಮ ದಿವಸವನ್ನು ಶಂಕರಜಯಂತಿ ಎಂದೂ ತತ್ವಜ್ಞಾನಿಗಳ ದಿವಸವೆಂದೂ ಪ್ರತೀವರ್ಷವೂ ಆಚರಿಸಲಾಗುತ್ತಿದೆ. ಧರ್ಮದ ಹೆಸರಿನಲ್ಲಿ ಜಗತ್ತಿನೆಲ್ಲೆಡೆಯಲ್ಲಿ ವಿಧ್ವಂಸಕ ಕೃತ್ಯಗಳಾಗುತ್ತಿರುವ ಈ ಸಂದರ್ಭದಲ್ಲಿ, ಇಂತಹುದೇ ಒಂದು ಸಂದಿಗ್ಧ ಕಾಲದಲ್ಲಿ ಅವತಾರವೆತ್ತಿದ ಶ್ರೀ ಶಂಕರಾಚಾರ್ಯರ ಜೀವನದ ಬಗ್ಗೆ ಪ್ರಸ್ತುತವಾಗುತ್ತಿದೆ ಈ ಲೇಖನ.

ನಮ್ಮ ಶ್ರೀ ಶೃಂಗೇರಿ ಗುರುಪೀಠದ ಗುರುಪರಂಪರೆಯಲ್ಲಿ ತ್ರಿಮೂರ್ತಿಗಳಲ್ಲಿ ಒಬ್ಬನಾದ ಸದಾಶಿವನಿಗೆ ಪ್ರಥಮ ಸ್ಥಾನ. ತ್ರಿಮೂರ್ತಿಗಳ ನಂತರ ಮಹರ್ಷಿಗಳಾದ ವಸಿಷ್ಠರು, ಪರಾಶರರು, ವೇದವ್ಯಾಸರು, ಗೌಡಪಾದಾಚಾರ್ಯರು, ಶ್ರೀ ಗೋವಿಂದ ಭಗವತ್ಪಾದರು ಹಾಗೂ ಶ್ರೀ ಶಂಕರಾಚಾರ್ಯರು ಅನುಕ್ರಮವಾಗಿ ಬರುತ್ತಾರೆ. ಶ್ರೀ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೃಂಗೇರಿ ಶಾರದಾಪೀಠದ ಗುರುಪರಂಪರೆ ಅವರ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರಿಂದ ಇಂದಿನ ತನಕ ಅವಿಚ್ಛಿನ್ನವಾಗಿ ಮುಂದುವರಿದಿದೆ.

ಶ್ರೀ ಶಂಕರಾಚಾರ್ಯರು ಜನಿಸಿದ್ದು ಕ್ರಿಸ್ತಶಕ 788 ಇಸವಿಯಲ್ಲಿ. ವಿಭವ ಸಂವತ್ಸರದ ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು. ಜನ್ಮಸ್ಥಳ ಕೇರಳದ ಕಾಲಡಿ ಎಂಬ ಊರು. ತಂದೆ ಶಿವಗುರು, ತಾಯಿ ಆರ್ಯಾಂಭೆ. ಇವರು ಆತ್ರೇಯ ಗೋತ್ರದ ಯುಜುರ್ವೇದದ ತೈತ್ತರೀಯ ಶಾಖೆಗೆ ಸೇರಿದವರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರೂ ಐದನೇ ವರ್ಷಕ್ಕೇ ಉಪನೀತರಾಗಿ ಎಂಟನೇ ವರ್ಷಕ್ಕೆ ಚತುರ್ವೇದಿಯೆನಿಸಿಕೊಂಡು ಹನ್ನೆರಡನೆಯ ವರ್ಷಕ್ಕೆ ಸಕಲ ಶಾಸ್ತ್ರ ಪಾರಂಗತರಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಇವರ ಗುರುಗಳು ನರ್ಮದಾ ನದೀತೀರದಲ್ಲಿ ಆಶ್ರಮವಿದ್ದ ಶ್ರೀ ಗೋವಿಂದ ಭಗವತ್ಪಾದರು. ಗೋವಿಂದ ಭಗವತ್ಪಾದರು ಮಾಂಡೋಕೋಪನಿಷತ್ತಿಗೆ ಭಾಷ್ಯವನ್ನು ಬರೆದ ಶ್ರೀ ಗೌಡಪಾದಾಚಾರ್ಯರ ಶಿಷ್ಯರು.

ಶ್ರೀ ಶಂಕರಾಚಾರ್ಯರ ಜೀವಿತಾವಧಿ 32 ವರ್ಷಗಳು ಮಾತ್ರ. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಗುರುಗಳ ಅಪೇಕ್ಷೆಯಂತೆ ಶ್ರೀ ಶಂಕರಾಚಾರ್ಯರು ಕಾಶಿಗೆ ತೆರಳಿ ಭಾಷ್ಯವನ್ನು ಬರೆದರು. ಅನಂತರದ ಹದಿನಾರು ವರುಷಗಳ ತನ್ನ ಆಯುಷ್ಯವನ್ನು ಅವರು ಈ ಭರತಖಂಡದ ಹಾಗೂ ಸನಾತನ ಧರ್ಮದ ಪುನರುಜ್ಜೀವನಕ್ಕಾಗಿ ಮುಡಿಪಾಗಿಟ್ಟು ತಾನು ಅವತಾರವೆತ್ತಿದ ಉದ್ದೇಶವನ್ನು ಈಡೇರಿಸಿಕೊಂಡರು.

ಮೊತ್ತಮೊದಲನೆಯದಾಗಿ ನಾಲ್ಕು ವೇದಗಳು, ಉಪನಿಷತ್ತುಗಳು ಹಾಗೂ ಭಗವದ್ಗೀತೆಯ ಅರ್ಥದ ಬಗ್ಗೆ ವೈದಿಕರೊಳಗೆಯೇ ಇದ್ದ ಹಲವಾರು ಸಂಶಯಗಳನ್ನು ನಿವಾರಿಸಿ, ಅವುಗಳ ಅರ್ಥವನ್ನು ಭಾಷ್ಯಗಳ ಮೂಲಕ ಇದಮಿತ್ಥಂ ಎಂಬಂತೆ ವಿವರಿಸಿದರು. ಭರತಖಂಡದ ಮೂಲೆ ಮೂಲೆಗಳಲ್ಲಿದ್ದ ಸಾವಿರಾರು ವಿದ್ವಾಂಸರಿಗೆ ಈ ಸತ್ಯವನ್ನು ಮನಗಾಣಿಸಿ ತನ್ನ ಶಿಷ್ಯರನ್ನಾಗಿ ಮಾಡಿಕೊಂಡರು. ದೇಶದ ಎಲ್ಲಾ ವಿದ್ವಾಂಸರನ್ನು ವಾದದಲ್ಲಿ ಗೆದ್ದು ಕಾಶ್ಮೀರದ ಸರ್ವಜ್ಞ ಪೀಠವನ್ನು ಅಲಂಕರಿಸಿ ವೇದಪಾಂಡಿತ್ಯದಲ್ಲಿ ತನ್ನ ಅಧಿಪತ್ಯವನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಮಾಡಿದರು. ಶ್ರೀ ಶಂಕರಾಚಾರ್ಯರು ವಿವರಿಸಿದ ವೇದಗಳ ಅರ್ಥವು ಅದ್ವೈತ ಸಿದ್ಧಾಂತವೆಂದು ಪ್ರಸಿದ್ಧಿಯಾಗಿದೆ. ಹೀಗೆ ಜನಸಾಮಾನ್ಯರಿಗೆ ಮಾದರಿಯಾಗಬೇಕಾಗಿದ್ದ ವೈದಿಕರಲ್ಲೇ ಇದ್ದ ಗೊಂದಲವನ್ನು ಅವರು ಮೊದಲು ನಿವಾರಿಸಿದರು.

ವೇದ ಉಪನಿಷತ್ತುಗಳನ್ನು ಅರ್ಥಮಾಡಿಕೊಳ್ಳದ ಜನಸಾಮಾನ್ಯರಿಗಾಗಿ ನೂರಾರು ಪ್ರಾಕಾರ ಗ್ರಂಥಗಳನ್ನು ರಚಿಸಿದರು. ಈ ಗ್ರಂಥಗಳು ವಿವಿಧ ದೇವದೇವತೆಗಳನ್ನು ಸ್ತುತಿಸುವ ಶ್ಲೋಕಗಳು ಹಾಗೂ ಗೀತೆಗಳನ್ನು ಒಳಗೊಂಡಿದೆ. ಲಲಿತಾ ಸಹಸ್ರನಾಮ, ಸೌಂದರ್ಯಲಹರಿ ಇಂತಹಾ ಪ್ರಸಿದ್ಧ ರಚನೆಗಳಿಗೆ ಉದಾಹರಣೆಗಳು. ಕೇದಾರನಾಥ, ಬದರಿ, ತಿರುಪತಿ ಸೇರಿದಂತೆ ಸಾವಿರಾರು ದೇವಾಲಯಗಳಿಗೆ ಭೇಟಿ ಇತ್ತು ವೈದಿಕ ಆಚರಣೆಗಳನ್ನು ಮರುಸ್ಥಾಪಿಸಿ, ಪುನರುಜ್ಜೀವನಗೊಳಿಸಿದರು. ಹೀಗೆ ಜನಸಾಮಾನ್ಯರಲ್ಲಿ ಸನಾತನ ಧರ್ಮದ ಮೇಲಿನ ಭಕ್ತಿಯನ್ನು ಮರುಸ್ಥಾಪಿಸಿದರು. ಶೈವ ವೈಷ್ಣವಾದಿ ಪಂಥಗಳಲ್ಲಿದ್ದ ಅವೈದಿಕ ಆಚರಣೆಗಳನ್ನು ದೂರೀಕರಿಸಿ ಪರಸ್ಪರ ದ್ವೇಷವನ್ನು ತೊಲಗಿಸಿ ಒಂದೇ ಛತ್ರದಡಿ ತಂದರು. ಶಿವ, ವಿಷ್ಣು, ಅಂಬಿಕಾ, ಭಾಸ್ಕರ, ಗಣಪತಿ ಹಾಗೂ ಸ್ಕಂದರನ್ನು ಸಮಾನವಾಗಿ ಪೂಜಿಸುವ ಪಂಚಾಯತನ ಪದ್ಧತಿಯನ್ನು ಜಾರಿಗೆ ತಂದು ದೇವರ ಶ್ರೇಷ್ಠತೆಯ ಹೆಸರಿನಲ್ಲಿ ಆಗುತ್ತಿದ್ದ ಬಡಿದಾಟವನ್ನು ನಿಲ್ಲಿಸಿದರು. ಮೇಲು ಕೀಳೆಂಬ ಭಾವನೆಯನ್ನು ದೂರೀಕರಿಸಿ ಸಮಸ್ತ ಜೀವಕೋಟಿಗಳಲ್ಲಿ ಇರುವ ಆತ್ಮ ಒಬ್ಬನೇ ಎಂದು ಸಾರಿದರು. ಆ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಬೌದ್ಧಧರ್ಮದ ವಿದ್ವಾಂಸರನ್ನು ವಾದದಲ್ಲಿ ಸೋಲಿಸಿ ಅವರಿಗೆ ಅವರ ಸಿದ್ಧಾಂತದಲ್ಲಿದ್ದ ತಪ್ಪುಗಳನ್ನು ಮನಗಾಣಿಸಿದರು. ಬೌದ್ಧಧರ್ಮವನ್ನೂ ಸನಾತನ ಧರ್ಮದ ತೆಕ್ಕೆಗೆ ತಂದರು. ಗೌತಮ ಬುದ್ಧನನ್ನು ವಿಷ್ಣುವಿನ ಅವತಾರವೆಂದು ಸಾರಿದರು. ಇದನ್ನೆಲ್ಲಾ ಸಾಧಿಸಲು ಕಾಲ್ನಡಿಗೆಯಲ್ಲಿ ಇಡೀ ಭರತಖಂಡವನ್ನು ಮೂರು ಬಾರಿ ಸುತ್ತಿದರು.

ದೇಶದ ನಾಲ್ಕು ದಿಕ್ಕುಗಳಲ್ಲಿ ಧರ್ಮ ಸಂರಕ್ಷಣೆಗಾಗಿ ನಾಲ್ಕು ಪೀಠಗಳನ್ನು ಸ್ಥಾಪಿಸಿ ತನ್ನ ನಾಲ್ಕು ಪ್ರಮುಖ ಶಿಷ್ಯರನ್ನು ನೇಮಿಸಿದ್ದು ಅವರ ಅತ್ಯಂತ ಮುತ್ಸದ್ದೀ ನಿರ್ಧಾರ. ದಕ್ಷಿಣದಲ್ಲಿ ಶೃಂಗೇರಿ, ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರಿ, ಪೂರ್ವದಲ್ಲಿ ಪುರಿ ಹೀಗೆ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿ ಒಂದೊಂದು ಪೀಠಕ್ಕೆ ಒಂದೊಂದು ವೇದವನ್ನು ಸಂರಕ್ಷಿಸುವ ಹೊಣೆಯಿತ್ತರು. ಇದರಿಂದಾಗಿಯೇ ಸನಾತನ ಧರ್ಮವು ಸಾವಿರದ ಇನ್ನೂರು ವರ್ಷಗಳ ನಂತರವೂ ಯಾವುದೇ ಅಪಾಯಕ್ಕೊಳಗಾಗದೇ ಉಳಿದಿದೆ. ಈ ಪೀಠಗಳಿಂದಾಗಿಯೇ ಈ ದೇಶದ ಜನರು ಈಗಲೂ ಸನಾತನ ಧರ್ಮದ ಆಚರಣೆಗಳನ್ನು ಪಾಲಿಸುತ್ತಾ ಬಂದಿದ್ದಾರೆ. ಧರ್ಮಸೂಕ್ಷ್ಮತೆಯಿದ್ದಾಗ ಆ ಸಂಶಯಗಳನ್ನು ಈ ಪೀಠಗಳು ನಿವಾರಿಸುತ್ತಾ ಬಂದಿವೆ. ಹೀಗೆ ಜನರಲ್ಲಿ ಸನಾತನ ಧರ್ಮದ ಮೇಲಿನ ನಂಬಿಕೆಯನ್ನು ಉಳಿಸುವ ಮೂಲಕ ಈ ದೇಶದ ಅಖಂಡತೆಯನ್ನೂ ಈ ಪೀಠಗಳು ಕಾಪಾಡಿಕೊಂಡು ಬಂದಿವೆ.

ಶ್ರೀ ಶಂಕರಾಚಾರ್ಯರು ಅಸ್ತಂಗತರಾದದ್ದು ಕ್ರಿ.ಶ.820ನೇ ಇಸವಿಯಲ್ಲಿ. ಕೇದಾರನಾಥ ದೇಗುಲದಲ್ಲಿ ಅವರು ತಮ್ಮ ಶಿಷ್ಯರಿಗೆ ನಿತ್ಯ ಪಾಠವನ್ನು ಉಪದೇಶಿಸಿದ ನಂತರ, ಪರ್ವತವನ್ನು ಹತ್ತಿ ಅದೃಶ್ಯರಾದರು ಎಂದು ಶಂಕರವಿಜಯದಲ್ಲಿ ಉಲ್ಲೇಖಿಸಲಾಗಿದೆ. “ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತಃ” ಎಂಬ ಭಗವಂತನು ಕೊಟ್ಟ ಮಾತಿನಂತೆ ಅವತರಿಸಿ ಯಾವುದೇ ರಕ್ತಪಾತವಿಲ್ಲದೆ, ಭಯ ಆಮಿಷಗಳನ್ನು ಒಡ್ಡದೇ ಸನಾತನ ಧರ್ಮವನ್ನು ಮರುಸ್ಥಾಪಿಸಿದ ಧರ್ಮ ಸಂಸ್ಥಾಪನಾಚಾರ್ಯರಿಗೆ ನಮೋ ನಮಃ

*ಶ್ರುತಿ ಸ್ಮೃತಿ ಪುರಾಣಾನಾಂ ಆಲಯಂ ಕರುಣಾಲಯಮ್।*
*ನಮಾಮಿ ಭಗವತ್ಪಾದಂ ಶಂಕರಂ ಲೋಕ ಶಂಕರಮ್।*

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ




*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)



## ಪಾದೆಬೆಟ್ಟಿನಲ್ಲಿ ನಡೆದ ವೈದಿಕ ಶಿಬಿರ

■...1ನೇ ಪುಟದಿಂದ

ಸಹಕರಿಸಿದರು. ಯಾವುದೇ ವಿಷಯದ ಕಲಿಕೆಗೆ ವಯಸ್ಸಿನ ನಿರ್ಬಂಧವಿಲ್ಲ ಮುಖ್ಯವಾಗಿ ಮನಸ್ಸಿರಬೇಕು ಎಂಬಂತೆ ಬೆಳ್ತಂಗಡಿಯ ಪ್ರಸಿದ್ಧ ಜ್ಯೋತಿಷ್ಯರಾದ ವಿಮೇಶ್‌ರಾವ್ ಕೊಲ್ಲಿಪಾಲ ಇವರು ತಮ್ಮ ಬಿಡುವಿಲ್ಲದ ದಿನಚರಿಯಲ್ಲಿಯೂ ಕೂಡ ಈ ಶಿಬಿರದಲ್ಲಿ ಭಾಗವಹಿಸಿ, ಮಕ್ಕಳಿಗೆ ಸಂಧ್ಯಾವಂದನೆಯ ವಿಧಿ–ವಿಧಾನಗಳ ಬಗ್ಗೆ ತಿಳಿಸಿದರು.

ಎಪ್ರಿಲ್ 17ರಂದು ನಡೆದ ಸಮಾರೋಪ ಸಭೆಯಲ್ಲಿ ಎ.ಬಿ.ಸಿ.ಡಿ & ಇ ಟ್ರಸ್ಟ್‌ನ ಶ್ರೀಯುತ ಐ. ಚಂದ್ರಕಾಂತ ರಾವ್, ಸ್ಥಾನಿಕ ಬ್ರಾಹ್ಮಣ ಸಭಾ(ರಿ.) ಪಡುಬಿದ್ರಿ ಇದರ ಅಧ್ಯಕ್ಷರಾದ ಶ್ರೀಯುತ ಎಂ. ಕೆ. ಮೋಹನ್ ರಾವ್, ಸ್ಥಾನಿಕ ಬ್ರಾಹ್ಮಣ ಸಂಘ(ರಿ.) ಶಾರದ ಮಂಟಪ ಉಡುಪಿ ಇದರ ಕಾರ್ಯದರ್ಶಿಯಾದ ಶ್ರೀ ಯು.ಅರವಿಂದ ಕುಮಾರ್, ಶ್ರೀ ಕೃಷ್ಣಮೂರ್ತಿ ರಾವ್ ದೇವಳದ ಆಡಳಿತ ಮೊಕ್ತೇಸರರಾದ ಶ್ರೀ ಬಿ. ಜಯರಾಮ್ ರಾವ್ ಹಾಗೂ ಶ್ರೀಯುತ ಕೃಷ್ಣರಾಜ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ಅಪೂರ್ವಳ ಪ್ರಾರ್ಥನೆಯ ಬಳಿಕ ಮುಂಡ್ಕೂರಿನ ಶ್ರೀ ಅರುಣ್ ರಾವ್ ಸ್ವಾಗತಿಸಿದರು. ಶ್ರೀಯುತ ಕೃಷ್ಣರಾಜ ಭಟ್ ಇವರು 'ಮಕ್ಕಳು ಇಲ್ಲಿ ಕಲಿತದ್ದನ್ನು ಮನೆಯಲ್ಲಿ ಪ್ರತಿದಿನ ಅಭ್ಯಸಿಸಿದರೆ ಮಾತ್ರ ಈ ಶಿಬಿರದ ಸಾರ್ಥಕತೆ, ಇದನ್ನು ಮಕ್ಕಳ ಹೆತ್ತವರು ಗಮನಿಸಬೇಕೆಂದು ತಿಳಿಸಿದರು. ಶ್ರೀ ಐ. ಚಂದ್ರಕಾಂತ ರಾವ್ ಇವರು ಹೆಣ್ಣು ಮಕ್ಕಳಿಗೂ ಕೂಡಾ ಇಂತಹ ಶಿಬಿರಗಳನ್ನು ನಡೆಸಿ ನಮ್ಮ ಸಂಪ್ರದಾಯಗಳು, ಸ್ತೋತ್ರಗಳ ಕಂಠಪಾಠ ಇತ್ಯಾದಿಗಳನ್ನು ಕಲಿಸಬೇಕೆಂದು ತಿಳಿಸಿದರು. ವೇದಿಕೆಯಲ್ಲಿದ್ದ ಶ್ರೀ ಎಂ. ಕೆ. ಮೋಹನ್ ರಾವ್, ಶ್ರೀ ಯು.ಅರವಿಂದ ಕುಮಾರ್ ಇವರು ಮಕ್ಕಳಿಗೆ ಶುಭಹಾರೈಸಿದರು. ಶ್ರೀ ಬಿ. ಜಯರಾಮ ರಾವ್ ಇವರು ಅತಿಥಿಗಳಿಗೆ ಸ್ಮರಣಿಕೆಗಳನ್ನಿತ್ತು ಗೌರವಿಸಿದರು. ಶ್ರೀ ಅರುಣ್ ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

ಸ್ಥಾನಿಕ ಬ್ರಾಹ್ಮಣ ಸಭಾ(ರಿ.) ಪಡುಬಿದ್ರಿ ಇವರು ಆಯೋಜಿಸಿದ ಈ ಕಾರ್ಯಕ್ರದಲ್ಲಿ ಎ.ಬಿ.ಸಿ.ಡಿ & ಇ ಟ್ರಸ್ಟ್, ಇನ್ನ, ಎಲ್ಲೂರು ಶ್ರೀ ಲಕ್ಷೀನಾರಾಯಣ ರಾವ್ ಜ್ಯೋತಿಷ್ಕ ಮೆಮೊರಿಯಲ್ ಟ್ರಸ್ಟ್, ಕುಕ್ಕಿಕಟ್ಟೆ, ಉಡುಪಿ, ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ, ಶ್ರೀ ಶಾರದ ಕೋ–ಆಪರೇಟಿವ್ ಸೊಸೈಟಿ, ಉಡುಪಿ ಹಾಗೂ ನಮ್ಮ ಸಮಾಜದ ಹಲವು ಗಣ್ಯರು ಪ್ರಾಯೋಜಕರಾಗಿ ಸಹಕರಿಸಿದರು.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲೊಂದು ಶ್ರೀರಾಮಧಾಮ

– ಶ್ರೀ ಜಿ. ಕೆ. ಕೋಲ್ವೆ





ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಕಳೆದ ತಾ.14.4.2019 ರಂದು ಆಯೋಜಿಸಿದ ಕಾರ್ಯಕ್ರಮಗಳ ಆರಂಭದ ಮೊದಲು ಬೆಳಗ್ಗಿನ ಶುಭ ಮುಹೂರ್ತದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಸಹಿತ ಪರಿವಾರ ದೇವರುಗಳನ್ನು ಶ್ರೀ ಸುಬ್ರಹ್ಮಣ್ಯ ಸಭಾ ಸದನದ ಎದುರು ತಾತ್ಕಾಲಿಕ ಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಿದ್ದು, ಎಲ್ಲರಿಗೂ ಸಂತಸದ ವಿಷಯ. ಈ ಮೂರ್ತಿಗಳು, ಈ ಹಿಂದೆ ಕಾರ್ಕಳ ಜೋಗುಳಬೆಟ್ಟಿನ 'ಶ್ರೀ ರಾಮಧಾಮ' ಧ್ಯಾನಮಂದಿರದಲ್ಲಿ ತಾ.13.4.2008ರಂದು ಪ್ರತಿಷ್ಠಾಪನೆಗೊಂಡು ದಿ. ಕೋಲ್ವೆ ಶಶಿಧರ ರಾವ್ (ಮಾಜಿ ವ್ಯವಸ್ಥಾಪಕ, ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ) ರವರ ಉಸ್ತುವಾರಿಯಲ್ಲಿದ್ದು, ಪೂಜಾನುಷ್ಠಾನ, ವರ್ಧಂತಿ ಉತ್ಸವ, ಕೌಟುಂಬಿಕ ಕಾರ್ಯಕ್ರಮ ಇತ್ಯಾದಿಗಳು ವಿಜೃಂಭಣೆಯಿಂದ 2017ರ ತನಕ ನಡೆದಿದ್ದು, ಅವರ ನಿಧನಾನಂತರ ನಿತ್ಯ ಪೂಜೆಗೆ ಸೀಮಿತವಾಗಿ, ಮಂದಿರದ ಮುಖ್ಯ ರೂವಾರಿ ಬೆಂಗಳೂರು ವಾಸಿ ಕೋಲ್ವೆ ಭಾಸ್ಕರರಾಯರು ಮುಂದಕ್ಕೆ ಮಂದಿರವನ್ನು ನಡೆಸಲು ಸಾಧ್ಯವಾಗದೆ, ನಮ್ಮ ಸಮಾಜದ ಯಾವುದೇ ಸಂಘ ಸಂಸ್ಥೆಗಳಿಗೆ ಅಥವಾ ಆಧ್ಯಾತ್ಮಿಕ ಪ್ರವೃತ್ತಿಯ ಗಣ್ಯರಿಗೆ ದಾನವಾಗಿ ಕೊಡುವ ಉದ್ದೇಶಹೊಂದಿದ್ದರು. ಬಹುಶ ಭಗವತ್ ಪ್ರೇರಣೆಯಂತೆ ಶ್ರೀಯುತ ಕರುಣ್ ಬೆಳ್ಳೆ, ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ರವರನ್ನು ಭಿನ್ನವಿಸಿಕೊಂಡಿದ್ದು, ಅವರು ಸಭಾದ ಆಡಳಿತ ಮಂಡಳಿಯ ಒಪ್ಪಿಗೆ ಪಡೆದು, ತಾ.27.2.2019ರಂದು ದೇವರ ಮೂರ್ತಿಗಳನ್ನು ಹಾಗೂ ಪೂಜಾ ಸಾಮಗ್ರಿಗಳನ್ನು ಶ್ರೀ ಭಾಸ್ಕರ ರಾಯರ ಅಣ್ಣ ಜಿ. ಕೆ. ಕೋಲ್ವೆಯವರ ಮುಖಾಂತರ ಸ್ವೀಕರಿಸಿ ಶ್ರೀ ಸಭಾದಲ್ಲಿ ಆರಾಧಿಸುತ್ತಾ ಇದ್ದು, ಈಗ ವ್ಯವಸ್ಥಿತವಾಗಿ ಪೂಜಾದಿಗಳು ನಡೆಯುವಂತೆ ಮಾಡಿದ್ದಾರೆ. ಮುಂದಕ್ಕೆ ಅನುಕೂಲವಾದಾಗ 'ಸಭಾ'ದ ಪೊಳಲಿ ನಿವೇಶನದಲ್ಲಿ ಚಂದದ ಗುಡಿಕಟ್ಟಿಸಿ, ಅಲ್ಲಿ ಸ್ಥಿರ ಪ್ರತಿಷ್ಠಾಪನೆ ಮಾಡುವ ಆಶಯ ಹೊಂದಿದ್ದಾರೆ. ಆ ಸುದಿನ ಬೇಗನೆ ಕೂಡಿಬರಲಿ ಹಾಗೂ ಭಗವಾನ್ ಶ್ರೀರಾಮಚಂದ್ರನ ಕೃಪಾಶೀರ್ವಾದ ಸಮಸ್ತ ಸಮಾಜಕ್ಕಿರಲಿ.

ಮಾಹಿತಿಗಾಗಿ : ಅಯೋಧ್ಯೆಯಲ್ಲಿ ಶ್ರೀರಾಮನ ಜನನ ಕಿ. ಪೂ. 10–1–5114 (ವೇದಗಳ ವೈಜ್ಞಾನಿಕ ಸಂಶೋಧನಾ ಸಂಸ್ಥೆ (ಐ.ಸರ್ವೆ) ತಾರಾಲಯ ತಂತ್ರಾಂಶ ಪ್ರಕಾರ) – ಸಂಗ್ರಹ

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ವೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣರಾವ್ ಬೆಂಗಳೂರು.


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯೆಳೆಸ್ರೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.
N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

## ಪೇಜಾವರ ಕಿರಿಯ ಶ್ರೀಗಳ ಭೇಟಿ



ಇತ್ತೀಚೆಗೆ ಬಾರಕೂರಿನ ಮಸ್ಕಿಬೈಲು ರಾಧಾಕೃಷ್ಣ ರಾಯರ ನಿವಾಸಕ್ಕೆ ಪೇಜಾವರ ಮಠದ ಕಿರಿಯ ಶ್ರೀಗಳು ಭೇಟಿಯಿತ್ತು, ಪಟ್ಟದ ದೇವರ ಪೂಜೆಗೈದು, ಭಿಕ್ಷೆ ಸ್ವೀಕರಿಸಿ, ಅನುಗ್ರಹ ಮಂತ್ರಾಕ್ಷತೆಯನ್ನಿತ್ತು ಶುಭ ಆರ್ಶೀವಚನ ನೀಡಿದರು.

ಹಿಂದೂ ಧರ್ಮದವರಾದ ನಾವು ಇಬ್ಬರು ಮಹಾ ಪುರುಷರ ಆದರ್ಶವನ್ನು ಪಾಲಿಸಬೇಕು. ತ್ರೇತಾಯುಗದ ಶ್ರೀ ರಾಮಚಂದ್ರ ದೇವರು, ನಾವು ಹೇಗೆ ಬದುಕು ಸಾಗಿಸಬೇಕೆಂಬ ರೀತಿಯಲ್ಲಿ ಆದರ್ಶರಾದರೆ, ರಾವಣನ ಆದರ್ಶವನ್ನು ನಾವು ಪಾಲಿಸದೇ ನಮ್ಮ ವ್ಯಕ್ತಿತ್ವವನ್ನೂ ರೂಪಿಸಬೇಕು ಹಾಗೆಯೇ ಧರ್ಮ ಕರ್ಮಗಳಲ್ಲಿ ಹನುಮಂತನನ್ನು ಅನುಸರಿಸಿ ಜೀವನವನ್ನು ಪಾವನಗೊಳಿಸಿಕೊಳ್ಳಬೇಕೆಂದು ಪೇಜಾವರ ಕಿರಿಯ ಯತಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಗಳು ಹೇಳಿದರು. ರಾಧಾಕೃಷ್ಣ ರಾಯರ ಕುಟುಂಬಸ್ಥರು, ಮಿತ್ರರು ಹಾಗೂ ಹಿತೈಷಿಗಳು ಆಗಮಿಸಿ ಸ್ವಾಮೀಜಿಗಳಿಂದ ಮಂತ್ರಾಕ್ಷತೆ ಪಡೆದರು.

## ಚಂಡಿಕಾಯಾಗ, ಪುಸ್ತಕ ಬಿಡುಗಡೆ



ಕುಕ್ಕಿಕಟ್ಟೆಯ ಡಾ। ವೈ. ಸುದರ್ಶನ ರಾವ್ ಹಾಗೂ ಡಾ. ವಿದ್ಯಾ ದಂಪತಿಗಳು ತಮ್ಮ ಕುಟುಂಬಸ್ಥರೊಡಗೂಡಿ ತಾ.02-05-2019ರಂದು ತಮ್ಮ ನಿವಾಸ ಅನಿಕೇತನದಲ್ಲಿ ಚಂಡಿಕಾಯಾಗವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಉಡುಪಿಯ ಶ್ರೀಶಾರದಾ ಭಜನಾ ಮಂಡಳಿಯವರಿಂದ ಭಜನಾ ಸೇವೆ ನೆರವೇರಿತು. ನಂತರ ಡಾ। ವೈ. ಸುದರ್ಶನ್ ರಾವ್‌ರವರು ತಾವು ಬರೆದ ಹಾಸ್ಯಬರಹಗಳ ಸಂಕಲನ ಮೆಡಿ-ಹಾಸ್ಯ ಪುಸ್ತಕವನ್ನು ಬಿಡುಗಡೆಗೊಳಿಸಿದರು.

## ಗೃಹಪ್ರವೇಶ, ಭಜನಾ ಕಾರ್ಯಕ್ರಮ



ಬಾರಕೂರು ಮಸ್ಕಿಬೈಲು ನಿವಾಸಿ ಶ್ರೀಮತಿ ರತ್ನಮಾಲ ಶ್ರೀ ರಾಮಚಂದ್ರ ರಾವ್ (ಗಜಾನನ ಪ್ರೆಸ್) ಇವರು ನೂತನವಾಗಿ ನಿರ್ಮಿಸಿದ ರಾಮರತ್ನ ಇದರ ಗೃಹಪ್ರವೇಶವು ಎಪ್ರಿಲ್ 17ರಂದು ಜರಗಿದ್ದು ಆ ಪ್ರಯುಕ್ತ ಮಟಪಾಡಿ ಶ್ರೀ ಚಂಡಿಕಾದುರ್ಗಾಪರಮೇಶ್ವರಿ ಭಜನಾ ಮಂಡಳಿ ಬಾರಕೂರು ಇವರಿಂದ ಭಜನಾ ಕಾರ್ಯಕ್ರಮ ಜರುಗಿತು.




ಎಮ್. ದೇವಾನಂದ್ ಭಟ್ Cell : 9845644556 9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


## ನಂದಳಿಕೆ ಮಹಾಲಿಂಗೇಶ್ವರ ದೇಗುಲಕ್ಕೆ ಭೂದಾನ



ಐತಿಹಾಸಿಕ ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇಗುಲದಲ್ಲಿ ಪ್ರತಿವರ್ಷ ನಡೆಯುವ ಸಿರಿ ಜಾತ್ರೆಯ ಅನ್ನಸಂತರ್ಪಣೆ ಮತ್ತು ಇನ್ನಿತರ ಕೆಲಸಕಾರ್ಯಗಳಿಗೆ ಸ್ಥಳದ ಕೊರತೆ ಉಂಟಾಗುತ್ತಿತ್ತು. ನಂದಳಿಕೆ ಮೂಡುಮನೆ (ಮಂತ್ರಿಮನೆ) ಯು ತುಳುನಾಡ ಸಿರಿಯ ಲೇಖಕ ದಿ। ಡಾ। ಎನ್. ವಾಸುದೇವ ಮತ್ತು ಅವರ ಧರ್ಮಪತ್ನಿ ರಮಾಬಾಯಿ ಅವರ ಸ್ಮರಣಾರ್ಥ ಅವರ ಸುಪುತ್ರರಾದ ಎನ್.ವಿ. ರಾವ್ ಪ್ರಸಾದ್, ನಿವೃತ್ತ ಎಸ್.ಪಿ. ಯವರಾದ ಎನ್.ವಿ.ಕಿಶನ್‌ಪ್ರಸಾದ್ ಮತ್ತು ಕುಟುಂಬಿಕರು ದೇಗುಲದ ಮುಂಭಾಗ ಇದ್ದ ಸುಮಾರು 1 ಎಕ್ರೆ 20 ಸೆಂಟ್ಸ್ ಜಾಗವನ್ನು ದೇಗುಲಕ್ಕೆ ದಾನವಾಗಿ ನೀಡಿದ್ದಾರೆ.

ದೇಗುಲದ ಪರವಾಗಿ ನಂದಳಿಕೆ ಚಾವಡಿ ಅರಮನೆ ಸುಂದರರಾಮ ಹೆಗ್ಡೆ ಅವರ ಪುತ್ರ ಎನ್. ಸುಹಾಸ್ ಹೆಗ್ಡೆ ಅವರು ದಾನಿಗಳನ್ನು ಗೌರವಿಸಿ, ಶಿಲಾಫಲಕ ಅನಾವರಣಗೊಳಿಸಿದರು.

ಈ ಸಂದರ್ಭ ಸ್ಥಳ ದಾನಿಗಳ ಕುಟುಂಬದ ಸದಸ್ಯರಾದ ಎನ್. ಬಾಲಚಂದ್ರ ರಾವ್, ಶಂಕರ್ ರಾವ್, ಉದಯಕುಮಾರ್, ಕೃಷ್ಣರಾವ್, ಚಿರಂತನ್, ಲಲಿತ ಕಿಶಾನ್‌ಪ್ರಸಾದ್, ದೇಗುಲದ ಪ್ರಧಾನ ಅರ್ಚಕ ಹರೀಶ್ ತಂತ್ರಿ, ಪ್ರಬಂಧಕ ರವಿರಾಜ್ ಭಟ್, ನಿವೃತ್ತ ಮುಖ್ಯ ಶಿಕ್ಷಕ ಎನ್. ಸುಧಾಕರ ರಾವ್, ವಿ.ಕೆ. ರಾವ್ ಉಪಸ್ಥಿತರಿದ್ದರು.

## ಕಬ್ಬಿನಾಲೆ ಶ್ರೀಧರ ಹೆಬ್ಬಾರರಿಂದ ಮೃತ್ಯುಂಜಯ ಯಾಗ

ಖಜಾನೆ ದಿ। ಮಂಜುನಾಥ ಹೆಬ್ಬಾರ್ ಮತ್ತು ದಿ। ವನಜಮ್ಮ ಇವರ ಸುಪುತ್ರರಾದ ಶ್ರೀಧರ ಹೆಬ್ಬಾರರು ತನ್ನ 60ನೇ ವಯಸ್ಸು ಮತ್ತು ವಿವಾಹದ 25ನೇ ವರ್ಷ (ಬೆಳ್ಳಿ ಹಬ್ಬ)ದ ಸವಿ ನೆನಪಿಗಾಗಿ ಫೆಬ್ರವರಿ ತಿಂಗಳ 9 ರಂದು ಮುದ್ರಾಡಿಯ ಬೆಳ್ಳಗುಂಡಿ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಶತ ರುದ್ರಾಭಿಷೇಕ, ಕಲ್ಪೋಕ್ತ ಪೂಜೆ ಮತ್ತು ಮೃತ್ಯುಂಜಯ ಯಾಗವನ್ನು ನೆರವೇರಿಸಿದರು. ಅವರ ಕುಟುಂಬಿಕರು, ಬಂಧು ಬಾಂಧವರೆಲ್ಲ ಸೇರಿ ಶ್ರೀಧರ ಹೆಬ್ಬಾರ್ ದಂಪತಿಗಳಿಗೆ ಶುಭ ಹಾರೈಸಿ, ಪ್ರಸಾದ ಭೋಜನವನ್ನು ಸ್ವೀಕರಿಸಿದರು.

ಹರಿದಾಸ ಶ್ರೀ.ಮ.ನಾ. ಹೆಬ್ಬಾರರು ಶ್ರೀಧರ ಹೆಬ್ಬಾರರ ಕುರಿತು ಬರೆದಿರುವ, ಅಭಿನಂದನಾ ಪೂರ್ವಕವಾದ ನಾಲ್ಕು ಭಾಮಿನಿ ಷಟ್ಪದಿ ಪದ್ಯಗಳನ್ನು ಶಿಕ್ಷಕರಾದ ಶ್ರೀ ಪರಮೇಶ್ವರ ಹೆಬ್ಬಾರರು ಮತ್ತು ಯಕ್ಷಗಾನ ಭಾಗವತ ಶ್ರೀ ಕೆ. ಸೀತಾರಾಮ ಹೆಬ್ಬಾರ ಇವರುಗಳು ಸುಶ್ರಾವ್ಯವಾಗಿ ಹಾಡಿ, ನೆರೆದ ಬಂಧುಗಳ ಮನ ರಂಜಿಸುವುದರೊಂದಿಗೆ ಶ್ರೀಧರ ಹೆಬ್ಬಾರ ಮತ್ತು ಶ್ರೀಮತಿ ಶಕುಂತಲಾ ಇವರುಗಳಿಗೆ ಶುಭ ಹಾರೈಸಿದರು.

## ಕೂಡಬೆಟ್ಟು ಸದಾಶಿವ ದೇವಸ್ಥಾನದಲ್ಲಿ ರಾಮನವಮಿ ಉತ್ಸವ

ತಾ. 13-04-2019ರಂದು ಬೆಳ್ತಂಗಡಿ ಕೂಡಬೆಟ್ಟು ಸದಾಶಿವ ದೇವಸ್ಥಾನದಲ್ಲಿ ರಾತ್ರಿ ರಾಮನವಮಿ ಉತ್ಸವವು ನೆರವೇರಿತು. ರಾತ್ರಿ ಮಹಾಪೂಜೆ ಅನ್ನಸಂತರ್ಪಣೆ ನೆರವೇರಿತು

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು, ಪಡುಬಿದ್ರಿ

ಭಕ್ತಾಭಿಮಾನಿಗಳೇ,

ಇದೇ ಬರುವ ತಾ.17-05-2019ನೇ ಶುಕ್ರವಾರ ಶ್ರೀ ದೇವಳದಲ್ಲಿ

**ನರಸಿಂಹ ಜಯಂತಿ ಮಹೋತ್ಸವವು**

ಶ್ರೀ ಕ್ಷೇತ್ರದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನಡೆಯಲಿದೆ.

ಅಂದು ದೇವರಿಗೆ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ ಹಾಗೂ ಸಂಜೆ ರಂಗಪೂಜೆ ನೆರವೇರಲಿರುವುದು.

ಬೆಳಿಗ್ಗೆ ಗಂಟೆ 9.30ಕ್ಕೆ ವಿಷ್ಣುಸಹಸ್ರನಾಮ ಪಾರಾಯಣ, ಗಂಟೆ 10 ರಿಂದ 11ರ ತನಕ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರಿ ಇದರ ಮಹಿಳಾ ವೇದಿಕೆಯವರಿಂದ ಭಜನಾ ಕಾರ್ಯಕ್ರಮ. ಗಂಟೆ 11 ರಿಂದ 12 ತನಕ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು, ಉಡುಪಿ ಇದರ ಮಹಿಳಾ ವಿಭಾಗದವರಿಂದ ಭಜನಾ ಕಾರ್ಯಕ್ರಮ.

ಈ ಕಾರ್ಯಕ್ರಮಗಳಲ್ಲಿ ಭಕ್ತರಾದ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಭಗವತ್ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. ಅಂದು ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ.

-ಆಡಳಿತ ಮಂಡಳಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು

## ಶುಭ ವಿವಾಹ

ಪಾದೆಬೆಟ್ಟು ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಸರ್ವೋತ್ತಮರಾಯರ ಪುತ್ರ **ಕೃಷ್ಣರಾಜ** ಹಾಗೂ ಕುಂಜಾರುಗಿರಿ ಶ್ರೀಮತಿ ವಿಶಾಲಾಕ್ಷಿ ಮತ್ತು ಶ್ರೀ ಜಯಕರ ರಾವ್ ಇವರ ಪುತ್ರಿ **ಶ್ರುತಿ** ಇವರ ವಿವಾಹವು ತಾ.24.02.2019 ರಂದು ಎರ್ಮಾಳು ಶ್ರೀ ಜನಾರ್ಧನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

## ಸೀಮಂತೋನ್ನಯನ

ಅಲೆವೂರಿನ ಶ್ರೀಮತಿ ಸಾವಿತ್ರಿ ಹಾಗೂ ಶ್ರೀ ಶಾಮರಾವ್ ದಂಪತಿಗಳು ತಮ್ಮ ಪುತ್ರ ನೀರಜ್‌ನ ಧರ್ಮಪತ್ನಿ ಶ್ರೀಮತಿ ನೇಹಾರವರ ಸೀಮಂತೋನ್ನಯನ ಸಮಾರಂಭವನ್ನು ತಾ.17.02.2019ರಂದು ತಮ್ಮ ಅಲೆವೂರಿನ ಸ್ವಗೃಹ "ಶಾಂತಾ"ದಲ್ಲಿ ನೆರವೇರಿಸಿದರು.

## ಶುಭ ಜನನ

ಅಮೇರಿಕಾದಲ್ಲಿ ನೆಲೆಸಿರುವ ಶ್ರೀಮತಿ ತೇಜಸ್ವಿನಿ ಹಾಗೂ ಶ್ರೀ ಸುರೇಂದ್ರ ದಂಪತಿಗಳಿಗೆ ತಾ.26.04.2019ರಂದು ಗಂಡುಮಗುವಿನ ಜನನವಾಗಿದೆ. ಶ್ರೀಮತಿ ತೇಜಸ್ವಿನಿಯವರು ಮೈಸೂರಿನ ಡಾ.ರಾಧಾಕೃಷ್ಣ ಹಾಗೂ ಗೀತಾ ದಂಪತಿಗಳ ಪುತ್ರಿ.

**** ****

ಬೆಂಗಳೂರಿನ ಶ್ರೀ ಕೆ ಅನಂತಕುಮಾರ್ ಹಾಗೂ ಶ್ರೀಮತಿ ಅಶ್ವಿನಿ ದಂಪತಿಗಳಿಗೆ ತಾ.14.03.2019ರಂದು ಹೆಣ್ಣುಮಗುವಿನ ಜನನವಾಗಿರುತ್ತದೆ.

## ಗೃಹಪ್ರವೇಶ

ಶ್ರೀ ಇನ್ನಂಜೆ ಮಾಧವರಾವ್ ರವರು ಉಂಡಾರಿನಲ್ಲಿ ನೂತನವಾಗಿ ನಿರ್ಮಿಸಿದ ನಿವಾಸದ ಗೃಹಪ್ರವೇಶ ಸಮಾರಂಭವನ್ನು ತಾ.06-05-2019ರಂದು ನೆರವೇರಿಸಿದರು. ಆ ಪ್ರಯುಕ್ತ ಚಂಡಿಕಾಹೋಮವನ್ನೂ ನೆರವೇರಿಸಿದರು.

**** ****

ಪೆರ್ಡೂರು ಶ್ರೀ ಪ್ರಭಾಕರ ಭಂಡಿ ಹಾಗೂ ಶ್ರೀಮತಿ ಪ್ರತಿಭಾ ಇವರು ತಾವು ಉಡುಪಿಯ ಒಳಕಾಡಿನಲ್ಲಿ ನೂತನವಾಗಿ ನಿರ್ಮಿಸಿದ ತಮ್ಮ ನಿವಾಸ ಅನಂತಕೃಪಾದ ಗೃಹಪ್ರವೇಶ ಸಮಾರಂಭವನ್ನು ತಾ.29.04.2019ರಂದು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಶಾರದಾ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮವು ಜರಗಿತು.

## ನಾಮಕರಣ

ಹಾಸನದಲ್ಲಿ ನೆಲೆಸಿರುವ ಶ್ರೀಮತಿ ದೀಪಾ ಮತ್ತು ಶ್ರೀ ಪ್ರಶಾಂತ್ ದಂಪತಿಗಳು ತಮ್ಮ ಪುತ್ರಿ ಜನ್ವಿತಾಳ ನಾಮಕರಣ ಸಮಾರಂಭವನ್ನು ತಾ.22.04.2019ರಂದು ಶ್ರೀಶಾರದಾ ಮಂಟಪದ ಜ್ಞಾನಮಂದಿರದಲ್ಲಿ ನೆರವೇರಿಸಿದರು.

## ಬ್ರಹ್ಮೋಪದೇಶ

**ಚಿ| ವರುಣ್**

ಪಡುಬಿದ್ರೆ ಶ್ರೀ ಸುದರ್ಶನಪ್ರಸಾದ ಮತ್ತು ಶ್ರೀದೇವಿ ದಂಪತಿಗಳು ತಮ್ಮ ಪುತ್ರ ವರುಣ್‌ನ ಬ್ರಹ್ಮೋಪದೇಶವನ್ನು **ತಾ.06.02.2019**ರಂದು ಪಡುಬಿದ್ರೆ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದ ಶ್ರೀ ಭಾರತೀ ಮಂಟಪದಲ್ಲಿ ನೆರವೇರಿಸಿದರು.

**ಚಿ| ಅಮೋಘ**

ಬಜಪೆ ಶ್ರೀ ರಾಜೇಶ್ ರಾವ್ ದಂಪತಿಗಳು ತಮ್ಮ ಪುತ್ರ ಅಮೋಘನ ಬ್ರಹ್ಮೋಪದೇಶವನ್ನು **ತಾ.22.03.2019** ರಂದು ಕಟೀಲಿನ ಶ್ರೀ ಸಾನಿಧ್ಯ ಸಭಾಗೃಹ ದಲ್ಲಿ ನೆರವೇರಿಸಿದರು

**ಚಿ| ತನ್ಮಯ**

ಪುತ್ತೂರು ಬನಾರಿ ಶ್ರೀ ರವಿನಾರಾಯಣ ಮತ್ತು ಶ್ರೀಮತಿ ಅನುಪಮಾ ದಂಪತಿಗಳು ತಮ್ಮ ಪುತ್ರ ತನ್ಮಯನ ಬ್ರಹ್ಮೋಪದೇಶವನ್ನು **ತಾ.28-04-2019**ರಂದು ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ಸಭಾಗೃಹದಲ್ಲಿ ನೆರವೇರಿಸಿದರು

**ಚಿ| ಧನ್ವಿನ್**

ಬೆಂಗಳೂರಿನ ಶ್ರೀ ಮುರಳೀಧರ ರಾವ್ ಮತ್ತು ಶ್ರೀಮತಿ ದೀಪಿಕಾ ದಂಪತಿಗಳು ತಮ್ಮ ಪುತ್ರ ಧನ್ವಿನ್‌ನ ಬ್ರಹ್ಮೋಪದೇಶ ಸಮಾರಂಭವನ್ನು **ತಾ.28.04.2019**ರಂದು ಪಾವಂಜೆ ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯ ದೇವಸ್ಥಾನದ ಯಾಗಮಂಟಪದಲ್ಲಿ ನೆರವೇರಿಸಿದರು.

**ಚಿ| ಅಮಿತ್**

ಕಾಪು ಶ್ರೀ ಸುದರ್ಶನರಾವ್ ಹಾಗೂ ಶ್ರೀಮತಿ ಪಲ್ಲವಿ ದಂಪತಿಗಳು ತಮ್ಮ ಪುತ್ರ ಅಮಿತ್‌ನ ಬ್ರಹ್ಮೋಪದೇಶ ಸಮಾರಂಭ ವನ್ನು **ತಾ.11.04.2019**ರಂದು ಕಾಪು ಶ್ರೀ ಲಕ್ಷ್ಮೀ ಜನಾರ್ಧನ ದೇವಸ್ಥಾನ ಸಭಾಭವನದಲ್ಲಿ ನೆರವೇರಿಸಿದರು

**ಚಿ| ಸುಮೇಧ**

ಕುಚ್ಚೂರು ಕಬ್ಬಿನಾಲೆ ಶ್ರೀ ಸತೀಶ ಹೆಬ್ಬಾರ್ ಮತ್ತು ಶ್ರೀಮತಿ ಪದ್ಮಶ್ರೀ ದಂಪತಿಗಳು ತಮ್ಮ ಪುತ್ರ ಸುಮೇಧನ ಬ್ರಹ್ಮೋಪದೇಶ ಸಮಾರಂಭವನ್ನು **ತಾ.29.04.2019**ರಂದು ಉಡುಪಿ ಶ್ರೀ ಶಾರದಾಮಂಟಪದಲ್ಲಿ ನೆರವೇರಿಸಿದರು

**ಚಿ| ಸೋಹನ್**

ಇನ್ನ ಶ್ರೀ ಸಂತೋಷರಾವ್ ಮತ್ತು ಶ್ರೀಮತಿ ಸಹನಾ ದಂಪತಿಗಳು ತಮ್ಮ ಪುತ್ರ ಸೋಹನ್‌ನ ಬ್ರಹ್ಮೋಪದೇಶ ಸಮಾರಂಭ ವನ್ನು **ತಾ.26.04.2019**ರಂದು ಪಡುಬಿದ್ರೆ ಉದಯಾದ್ರಿ ಬಾಲಗಣಪತಿ ದೇವಸ್ಥಾನದಲ್ಲಿ ನೆರವೇರಿಸಿದರು.

**ಚಿ| ಪ್ರಥಮ್**

ಇನ್ನ ಶ್ರೀ ಸಂದೀಪರಾವ್ ಮತ್ತು ಶ್ರೀಮತಿ ವೃಷ್ಟಿ ದಂಪತಿಗಳು ತಮ್ಮ ಪುತ್ರ ಪ್ರಥಮ್‌ನ ಬ್ರಹ್ಮೋಪದೇಶ ಸಮಾರಂಭ ವನ್ನು **ತಾ.26.04.2019**ರಂದು ಪಡುಬಿದ್ರೆ ಉದಯಾದ್ರಿ ಬಾಲಗಣಪತಿ ದೇವಸ್ಥಾನದಲ್ಲಿ ನೆರವೇರಿಸಿದರು

## ಹೆಬ್ರಿ ತಾಲೂಕು ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಮ.ನಾ.ಹೆಬ್ಬಾರರಿಗೆ ಸಮ್ಮಾನ



## ನಿಧನ



**ಶ್ರೀಮತಿ ಕಸ್ತೂರಿ ಯು.ಶರ್ಮ**

ಮಂಗಳೂರಿನ ವ್ಯಾಸ ನಗರದಲ್ಲಿ ವಾಸವಾಗಿದ್ದ ಶ್ರೀ ಸುಬ್ರಹ್ಮಣ್ಯ ಸಭಾದ ಮ್ಯಾನೇಜರ್ ಶ್ರೀ ಎ. ಪಿ. ಉಮಾಕಾಂತ್ ಶರ್ಮ ಅವರ ಪತ್ನಿ ಶ್ರೀಮತಿ ಕಸ್ತೂರಿ ಯು. ಶರ್ಮ (71) ಅವರು ದಿನಾಂಕ 23-04-2019 ನೇ ಮಂಗಳವಾರ ನಿಧನರಾದರು. ಇವರು ಪತಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**** ****



**ಶ್ರೀಮತಿ ಕಾವೇರಿಯಮ್ಮ**

ಸುರತ್ಕಲ್ ಮಲ್ಲಮಾರ್‌ನಲ್ಲಿ ವಾಸವಾಗಿದ್ದ ದಿವಂಗತ ಮಲ್ಲಮಾರು ಶ್ರೀನಿವಾಸ ಶ್ಯಾನುಭೋಗ್‌ರವರ ಧರ್ಮಪತ್ನಿ ಶ್ರೀಮತಿ ಕಾವೇರಿಯಮ್ಮನವರು (79 ವರ್ಷ) ಹೃದಯಾಘಾತದಿಂದ ತಮ್ಮ ಸ್ವಗೃಹದಲ್ಲಿ ದಿ.31-3-2019ರಂದು ನಿಧನರಾದರು. ಇವರು ಓರ್ವ ಪುತ್ರ, ಸೊಸೆ ಹಾಗೂ ಇಬ್ಬರು ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**** ****



**ಕೊಕ್ರಾಡಿ ರಾಮರಾಯ**

ನಿವೃತ್ತ ಅಧ್ಯಾಪಕರಾದ ಶ್ರೀ ಕೊಕ್ರಾಡಿ ರಾಮರಾಯರು ತಾ 19-04-2019ರಂದು ತಮ್ಮ 86 ನೇ ವರ್ಷ ಪ್ರಾಯದಲ್ಲಿ ನಿಧನಹೊಂದಿದರು

**** ****



**ಶ್ರೀ ಯೋಗೀಶ್ ರಾವ್**

ನ್ಯಾಯಾಲಯದ ನಿವೃತ್ತ ಶಿರಸ್ತೇದಾರ್ ಪುತ್ತೂರು ನಿವಾಸಿ ಶ್ರೀ ಯೋಗೀಶ್ ರಾವ್‌ರವರು 03-05-2019 ರಂದು ರಸ್ತೆ ಅಪಘಾತದಲ್ಲಾದ ಗಾಯಗಳಿಂದಾಗಿ ನಿಧನಹೊಂದಿದರು. ರಾಷ್ಟ್ರಮಟ್ಟದ ಕ್ರೀಡಾಪಟುವಾಗಿದ್ದ ಇವರು ಮಕ್ಕಳಿಗೆ ಈಜು ತರಬೇತಿ ನೀಡುತ್ತಿದ್ದರು. ಪುತ್ತೂರು ಶಿವಬ್ರಾಹ್ಮಣ ಸಭಾದ ನಿರ್ದೇಶಕರೂ ಆಗಿದ್ದರು. ಮತದಬೆಟ್ಟು ರಾಜರಾಜೇಶ್ವರಿ ದೇವಸ್ಥಾನದ ಟ್ರಸ್ಟಿಯೂ ಆಗಿದ್ದರು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.22-05-2019 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-05-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-05-2019 ಮತ್ತು ತಾ.07-06-2019 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವೃಷಭ ಮಾಸದ ವಿಶೇಷ ದಿನಗಳು

| | |
|---|---|
| 15-05-2019 | ವೃಷಭ ಸಂಕ್ರಮಣ, ಸರ್ವೈಕಾದಶಿ |
| 18-05-2019 | ಹುಣ್ಣಿಮೆ |
| 19-05-2019 | ವಸಂತ ಋತು ವೈಶಾಖ ಮಾಸದ ಕೃಷ್ಣಪಕ್ಷಾರಂಭ |
| 22-05-2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ಗಂಟೆ 10-04ಕ್ಕೆ |
| 30-05-2019 | ಸರ್ವೈಕಾದಶಿ |
| 03-06-2019 | ಅಮಾವಾಸ್ಯೆ |
| 04-06-2019 | ಗ್ರೀಷ್ಮಋತು ಜೇಷ್ಠ ಮಾಸದ ಶುಕ್ಲಪಕ್ಷಾರಂಭ |
| 13-06-2019 | ಸರ್ವೈಕಾದಶಿ |
| 15-06-2019 | ಮಿಥುನ ಸಂಕ್ರಮಣ |
| 17-06-2019 | ಹುಣ್ಣಿಮೆ |
| 18-06-2019 | ಗ್ರೀಷ್ಮಋತು ಜೇಷ್ಠ ಮಾಸದ ಕೃಷ್ಣಪಕ್ಷಾರಂಭ |

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan YOUR GUIDE TO THE FINANCIAL JUNGLE

Visit : www.sharekhan.com

## ವಿದ್ಯಾರ್ಥಿಗಳ ಗಮನಕ್ಕೆ ಪ್ರಕಟಣೆ :

ಶಾಲೆ, ಕಾಲೇಜುಗಳ ಫಲಿತಾಂಶ ಇದೀಗ ಹೊರ ಬಿದ್ದಿದೆ. 2019ನೇ ವರ್ಷದಲ್ಲಿ ಕೃಷಿ ವಿಜ್ಞಾನ, ಪಶು ವೈದ್ಯಕೀಯ, ನರ್ಸಿಂಗ್, ಲ್ಯಾಬ್ ಟೆಕ್ನಾಲಜಿ (Agri science, Veterinary, Nursing, Lab Technology, Health Inspector). ಪದವಿಗೆ ಪ್ರವೇಶ ಪಡೆಯುವ ನಮ್ಮ ಸಮಾಜದ ಒಬ್ಬ ವಿದ್ಯಾರ್ಥಿಯ ಕಾಲೇಜು ಫೀಸಿನ ಒಟ್ಟು ಮೊತ್ತವನ್ನು (Full Fees) ಶ್ರೀ.ಬಿ.ಅಚ್ಯುತರಾಯರು ವೈಯಕ್ತಿಕವಾಗಿ ಭರಿಸಲು ಮುಂದೆ ಬಂದಿದ್ದಾರೆ. ಇವರನ್ನು ಜೂನ್, 2019ರ ಮೊದಲೇ ಸಂಪರ್ಕಿಸಿ ವಿವರಗಳನ್ನು ಪಡೆಯಬಹುದು.

ವಿಳಾಸ : **ಬಿ.ಅಚ್ಯುತರಾವ್** (9886231491)
001–ಗರುಡಾರಾಯಲ್ ಎಪಾರ್ಟ್‌ಮೆಂಟ್ ಶಾರದಾಂಬಿನಗರ,
ಜಾಲಿಹಳ್ಳಿ ವಿಲೇಜ್, ಬೆಂಗಳೂರು–560013. E-mail : b.achutha.rao@gmail.com

ಭಕ್ತಿಗೀತೆ

### ಕಾರ್ತಿಕೇಯನ ಭಜಿಸಿರೊ

ಕಾರ್ತಿಕೇಯನ ಭಜಿಸಿರೋ ನೀವೆಲ್ಲರೂ
ಕಾರ್ತಿಕೇಯನ ಭಜಿಸಿರೋ ॥ಪಲ್ಲವಿ॥
ಆರ್ತಜನ ರಕ್ಷಕನೂ .....ಶ್ರೀಕೃತ್ತಿವಾಸನು
ಆಶ್ರಿತ ಜನ ವಂದಿತನೂ
ಕಾರ್ತಿಕೇಯನು ಭಕ್ತಜನರನು
ಅರ್ತಿಯಿಂದಲಿ ಪೊರೆಯುವಾತನು
ಜ್ಞಾನಶಕ್ತಿಯು ದೀನಜನರನು
ಅನವರತ ರಕ್ಷಿಸುವ ದೇವನು
ಕಾರ್ತಿಕೇಯನ ಭಜಿಸಿರೋ ನೀವೆಲ್ಲರೂ ।೧।

ಪಕ್ಷಿ ವಾಹನ ದೇವನೂ.....ಅಂತರ್ಯಾಮಿ
ಸಾಕ್ಷಿರೂಪನು ಸ್ವಾಮಿಯೂ
ಕುಕ್ಷಿಯಲಿ ಈರೇಳು ಲೋಕವ
ರಕ್ಷಿಸಿದ ವಿಷಕಂಠ ಪುತ್ರನು
ಅಕ್ಷಿಯಿಂದಲಿ ಇಕ್ಷುಛಾಪನ
ಶಿಕ್ಷಿಸಿದ ಫಾಲಾಕ್ಷ ಸುತನೂ
ಕಾರ್ತಿಕೇಯನ ಭಜಿಸಿರೋ ನೀವೆಲ್ಲರೂ ।೨।

ಅಜ್ಞಾನತಿಮಿರವನೂ ಪರಿಹರಿಸುವಾತನು
ಸುಜ್ಞಾನ ವಾರುತಿಯೂ
ಜ್ಞಾನ ಭಾಸ್ಕರ ಜ್ಞಾನರೂಪನು
ಜ್ಞಾನದಮೃತಧಾರೆ ಸುರಿವನು
ಜ್ಞಾನಶಕ್ತಿಯನೀವ ಸುಪ್ರ
ಸನ್ನ ಮೂರುತಿ ಒಲಿದು ಬರುವನು
ಕಾರ್ತಿಕೇಯನ ಭಜಿಸಿರೋ ನೀವೆಲ್ಲರೂ ।೩।

ಸುರರ ಸಂಕಟಗಳನೂ ಪರಿಹರಿಸಿದಾತನು
ನರರಿಗೊಲಿದು ಬಂದನೂ
ಧುರದಿ ರಕ್ಕಸರನ್ನು ಮಡುಹಿದ
ದುರುಳ ತಾರಕನನ್ನು ಕೆಡಹಿದ
ಪರಮವೀರನು ಧರೆಗೆ ಬಂದನು.
ಕೊಡಿಗೆ ಪುರದಲಿ ಒಲಿದು ನಿಂದನು
ಕಾರ್ತಿಕೇಯನ ಭಜಿಸಿರೋ ನೀವೆಲ್ಲರೂ ।೪।

ಶ್ರೀ ಶ್ರೀ ಶ್ರೀ ಸುಬ್ರಹ್ಮಣ್ಯೇಶ್ವರ

**–ಅಪಯಶ**

ಕವನ

### ದಾರಿದೀಪ

ಬೆಳಕನರಸುವ ಜೀವ
ಮಂಜಿಗಂಜುವುದಿಲ್ಲ
ಒಡ್ಡಿದಾತಂಕಗಳ ದಾಟಬೇಕು,
ಬೇರೆ ದಾರಿ ಇಲ್ಲ

**–ಮಲ್ಲಿಕ್ ಉಳಿಯಾರು.**



ಬಾರಕೂರು ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ರಥೋತ್ಸವದ ಪ್ರಯುಕ್ತ ಮಸ್ಕೆಬೈಲು ಶರಣ್ಯ. ಜಿ. ರಾವ್ ಇವರಿಂದ ಅಷ್ಟಕ ಸಂಗೀತ ಜರುಗಿತು




ಬ್ರಹ್ಮಾವರದ ಡಾ.ವೈ.ರವೀಂದ್ರನಾಥ ರಾವ್‌ರವರು ತೆಂಕನಿಡಿಯೂರಿನ ಸರಕಾರಿ ಕಾಲೇಜಿನಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದರು.



ಶ್ರೀಶಾರದಾ ಭಜನಾ ಮಂಡಳಿ, ಉಡುಪಿ ಇವರಿಂದ ಉಡುಪಿಯ ಶ್ರೀಕೃಷ್ಣ ದೇವಸ್ಥಾನದಲ್ಲಿ ಭಜನಾ ಸೇವೆ ನೆರವೇರಿತು.

## ಅರ್ಚಕರು ಬೇಕಾಗಿದ್ದಾರೆ

ಪಡುಬಿದ್ರೆ, ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಪೂರ್ಣಕಾಲಿಕ ಸ್ಮಾರ್ತಬ್ರಾಹ್ಮಣ ಅರ್ಚಕರು ಬೇಕಾಗಿದ್ದಾರೆ. ದೇವಾಲಯದ ಸಮೀಪದಲ್ಲೇ ವಾಸಕ್ಕೆ ಮನೆ ಹಾಗೂ ಆಕರ್ಷಕ ಮಾಸಿಕ ವೇತನ ನೀಡಲಾಗುವುದು. ಆಸಕ್ತರು ದೇವಸ್ಥಾನದ ಆಡಳಿತ ಮೊಕ್ತೇಸರ ಬಿ.ಜಯರಾಮರಾವ್ (9844545040) ಅಥವಾ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ (9449591513) ಇವರನ್ನು ಸಂಪರ್ಕಿಸಬಹುದು.


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**


ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE




**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363



ಪಡುಬಿದ್ರೆ ಪಾದೆಬೆಟ್ಟು ಶ್ರೀ ರವಿಪ್ರಕಾಶ್ ಹಾಗೂ ಶ್ರೀಮತಿ ಮಮತಾ ರಾವ್ ಇವರ ಪುತ್ರಿ ನವ್ಯಶ್ರೀ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 621 ಅಂಕ ಪಡೆದು ತನ್ನ ವಿಟ್ಲ ಆಂಗ್ಲ ಮಾಧ್ಯಮ ಶಾಲೆಗೆ ದ್ವಿತೀಯ ಸ್ಥಾನ ಪಡೆದಿರುತ್ತಾಳೆ



ಬೆಂಗಳೂರಿನ ಹೋಲಿ ಚೈಲ್ಡ್ ಕಾನ್ವೆಂಟ್‌ನ ವಿದ್ಯಾರ್ಥಿ ಹಾಗೂ ಶ್ರೀ ಗಣೇಶ ರಾವ್ ಹಾಗೂ ಶ್ರೀಮತಿ ಸಂಧ್ಯಾರವರ ಪುತ್ರ ಪ್ರಥಮ್ ರಾವ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 610 ಅಂಕ ಗಳಿಸಿರುತ್ತಾನೆ



ಉಡುಪಿಯ ಖ್ಯಾತ ಲೆಕ್ಕಪರಿಶೋಧಕರಾದ ಶ್ರೀ ಗಣೇಶ್ ಹೆಬ್ಬಾರ್ ಹಾಗೂ ಶ್ರೀಮತಿ ಆರತಿ ಹೆಬ್ಬಾರ್‌ರ ಪುತ್ರ ಯಾಜ್ಞವಲ್ಕ ಹೆಬ್ಬಾರ್ ಸಿ.ಬಿ.ಎಸ್.ಸಿ ಪರೀಕ್ಷೆಯಲ್ಲಿ 93.6 ಶೇಕಡಾ ಅಂಕ ಗಳಿಸಿದ್ದಾನೆ



ಕಿನ್ನಿಗೋಳಿ ಸಂತ ಲಾರೆನ್ಸ್ ಶಾಲೆಯ ವಿದ್ಯಾರ್ಥಿನಿ ಹಾಗೂ ಕಟೀಲಿನ ಶ್ರೀ ಲಕ್ಷ್ಮೀನಾರಾಯಣ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ದಂಪತಿಗಳ ಪುತ್ರಿ ಸುಪರ್ಣಾ ಸಿ.ಬಿ.ಎಸ್.ಸಿ ಪರೀಕ್ಷೆಯಲ್ಲಿ 91.8 ಶೇಕಡಾ ಅಂಕ ಗಳಿಸಿದ್ದಾಳೆ




ಮುಂಬಯಿಯ ಶ್ರೀ ಅನಂತರಾಜ ರಾವ್ ಪಿ.ವಿ ಹಾಗೂ ಶ್ರೀಮತಿ ರೋಹಿಣಿ ರಾವ್‌ರವರ ಪುತ್ರಿ ಅನನ್ಯ ಎ ರಾವ್ ಹತ್ತನೇ ತರಗತಿಯ ಸಿ.ಬಿ.ಎಸ್.ಸಿ ಪರೀಕ್ಷೆಯಲ್ಲಿ 97 ಶೇಕಡಾ ಅಂಕ ಗಳಿಸಿರುತ್ತಾಳೆ



ಉಡುಪಿಯ ಡಾ. ಸಂತೋಷ ರಾವ್ ಹಾಗೂ ಶ್ರೀಮತಿ ಪ್ರೀತಿ ರಾವ್ ದಂಪತಿಗಳ ಪುತ್ರಿ ಪ್ರೇರಣಾ ರಾವ್ ಹತ್ತನೇ ತರಗತಿಯ ಸಿ.ಬಿ.ಎಸ್.ಸಿ ಪರೀಕ್ಷೆಯಲ್ಲಿ 96.6 ಶೇಕಡಾ ಅಂಕ ಗಳಿಸಿರುತ್ತಾಳೆ



ಮಂಗಳೂರಿನ ಬೊಸ್ಕೋ ಕಾಲೇಜಿನ ವಿದ್ಯಾರ್ಥಿ, ದಿ। ಕೆ.ಎನ್.ಶಿವಕುಮಾರ್ ಹಾಗೂ ಸೌಮ್ಯ ದಂಪತಿಗಳ ಪುತ್ರ ಕೆ.ಎಸ್.ನರಸಿಂಹ ಕುಮಾರ್ ಪಿಯುಸಿ ಪರೀಕ್ಷೆಯಲ್ಲಿ 90 ಶೇಕಡಾ ಅಂಕ ಗಳಿಸಿರುತ್ತಾನೆ



ಕಾರ್ಕಳ ಬೈಲೂರಿನ ಸರಕಾರಿ ಶಾಲೆಯ ವಿದ್ಯಾರ್ಥಿನಿ, ಶ್ರೀ ಉದಯಕುಮಾರ ಹಾಗೂ ಶ್ರೀಮತಿ ಸುಜಾತ ದಂಪತಿಗಳ ಪುತ್ರಿ ಶಾರ್ವರೀ ರಾವ್ ಎಸ್.ಎಲ್.ಎಲ್.ಸಿ ಪರೀಕ್ಷೆಯಲ್ಲಿ 566 ಅಂಕ ಗಳಿಸಿರುತ್ತಳೆ



ನಿಟ್ಟೆ ಎನ್‌ಎಸ್‌ಎಎಂ ಕಾಲೇಜಿನ ವಿದ್ಯಾರ್ಥಿನಿ ಹಾಗೂ ಕಾರ್ಕಳ ಕುಕ್ಕುಂದೂರಿನ ಶ್ರೀ ಹರೀಶ್ ಕುಮಾರ್ ಮತ್ತು ಶ್ರೀಮತಿ ಅಶ್ವಿನಿ ದಂಪತಿಗಳ ಪುತ್ರಿಯಾದ ಸನ್ನಿಧಿ ಪಿಯುಸಿ ಪರೀಕ್ಷೆಯಲ್ಲಿ 92.8 ಶೇಕಡ ಅಂಕಗಳನ್ನು ಗಳಿಸಿರುತ್ತಾಳೆ



ಕಿನ್ನಿಗೋಳಿಯ ರೋಟರಿ ಇಂಗ್ಲೀಷ್ ಶಾಲೆಯ ವಿದ್ಯಾರ್ಥಿನಿ ಹಾಗೂ ಶ್ರೀ ಎಸ್ ಭುವನೇಶ್ ರಾವ್ ಮತ್ತು ಶ್ರೀಮತಿ ಪ್ರತಿಮಾ ದಂಪತಿಗಳ ಪುತ್ರಿ ವರ್ಷಿಣಿ ರಾವ್ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 560 ಅಂಕ ಗಳಿಸಿರುತ್ತಾಳೆ



ಕೇರಳದ ಶ್ರೀ ಯು.ದುರ್ಗಾಪ್ರಸಾದ್‌ರ ಪುತ್ರಿ ಶ್ರಾವ್ಯಶ್ರೀ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ.




ಧರ್ಮಸ್ಥಳದಲ್ಲಿ ಉದ್ಯೋಗಿಯಾಗಿರುವ ಶ್ರೀ ನಿತ್ಯಾನಂದ ರಾವ್ ಮತ್ತು ಶ್ರೀಮತಿ ಸುವರ್ಣಲತಾ ದಂಪತಿಗಳ ಪುತ್ರ, ಉಜಿರೆಯ ಎಸ್.ಡಿ.ಎಂ ಕಾಲೇಜಿನ ವಿದ್ಯಾರ್ಥಿ ಉಲ್ಲಾಸ್ ರಾವ್ ದ್ವಿತೀಯ ಪಿಯುಸಿ ಪರೀಕ್ಷೆಯ ಕಲಾ ವಿಭಾಗದಲ್ಲಿ 568 ಅಂಕ ಪಡೆದು ಬೆಳ್ತಂಗಡಿ ತಾಲೂಕಿಗೆ ಪ್ರಥಮ ರಾಂಕ್ ಪಡೆದಿದ್ದಾನೆ.



2019ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಾರ್ಕೂರು ಹೇರಾಡಿಯ ಶ್ರೀ ವಿದ್ಯೇಶ ವಿದ್ಯಾಮಾನ್ಯ ನೇಷನಲ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ, ಶ್ರೀ ಬೆಳ್ಳೆ ಸದಾಶಿವ ರಾವ್ ಮತ್ತು ಶ್ರೀಮತಿ ಸಹನಾ ದಂಪತಿಗಳ ಪುತ್ರಿ, ಕು। ಸಾಗರಿಕಾ ಎಸ್ ರಾವ್ 95% (591/625) ಅಂಕಗಳಿಸಿದ್ದಾಳೆ.



ಬೆಂಗಳೂರಿನ ಶ್ರೀ ಜಯಂತ್ ರಾಜ್ ಮತ್ತು ಶ್ರೀಮತಿ ಸೀಮಾ ದಂಪತಿಗಳ ಪುತ್ರ ಪ್ರಣವ್ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 94.6 ಶೇಕಡಾ ಅಂಕ ಗಳಿಸಿರುತ್ತಾನೆ. ಇವನು ನಮ್ಮ ಸಂಘದ ನಿಕಟಪೂರ್ವ ಕೋಶಾಧಿಕಾರಿ ಶ್ರೀ ಕೆ ಸುಧಾಕರ ರಾವ್ ಹಾಗೂ ಶ್ರೀಮತಿ ಜ್ಯೋತಿ ದಂಪತಿಗಳ ಪೌತ್ರ.



ಕುವೈಟ್‌ನ ಡೆಲ್ಲಿ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿ ಹಾಗೂ ಶ್ರೀ ವಿಶ್ವೇಶ್ವರ ಕಾರ್ಕಳ್ ಮತ್ತು ಶ್ರೀಮತಿ ಜಯಲಕ್ಷ್ಮಿ ಪಿ.ಆರ್ ದಂಪತಿಗಳ ಪುತ್ರನಾದ ಅಜಯ್ ವಿ ಕಾರ್ಕಳ್ ಹನ್ನೆರಡನೆಯ ತರಗತಿಯ ಸಿ.ಬಿ.ಎಸ್.ಸಿ ಪರೀಕ್ಷೆಯಲ್ಲಿ 92.8ಶೇಕಡಾ ಅಂಕ ಗಳಿಸಿರುತ್ತಾನೆ



ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಹಾಗೂ ಶ್ರೀಮತಿ ಶೈಲಜಾರವರ ಸುಪುತ್ರಿ ಕು. ಸಿಂಚನಾ, ಮಂಗಳೂರಿನ ಶಾರದಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ, ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡಾ 89 ಗಳಿಸಿದ್ದಾಳೆ.



ಶ್ರೀ ಸತೀಶ್ ರಾವ್ ಮಲ್ಲಮಾರು ಹಾಗೂ ಶ್ರೀಮತಿ ಶೋಭಾ ರಾವ್ ಇವರ ಪುತ್ರಿ, ಸುರತ್ಕಲ್‌ನ ಶ್ರೀ ಗೋವಿಂದ ದಾಸ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ, ಕು। ಸಂಜನಾ ಎಂ.ರಾವ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 539/600 (89.83%) ಅಂಕ ಗಳಿಸಿದ್ದಾಳೆ.

## ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಶ್ರೀ ಪಿ.ಬಾಲಕೃಷ್ಣ, ಬೆಂಗಳೂರು



ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ಶ್ರೀ.ಪಿ.ಬಾಲಕೃಷ್ಣ ಅವರು ಶ್ರೀ ಶಾರದಾ ಪತ್ರಿಕೆಗೆ ಮಹಾಪೋಷಕರಾಗಿ ನಮ್ಮನ್ನು ಪ್ರೋತ್ಸಾಹಿಸಿದ್ದಾರೆ.

ಶ್ರೀಯುತ ಪಿ.ಬಾಲಕೃಷ್ಣರವರು ಕೊಡವೂರಿನ ದಿ। ಪಡಮ್ನೂರು ಪದ್ಮನಾಭ ರಾವ್ ಮತ್ತು ಭಾಗೀರಥಿ ದಂಪತಿಯವರ ದ್ವಿತೀಯ ಪುತ್ರನಾಗಿ 15-12-1939ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಅಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿ ಎಚ್.ಎ.ಎಲ್ ಕಂಪೆನಿಯಲ್ಲಿ 34 ವರ್ಷ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದರು. ಪತ್ನಿ ಶ್ರೀಮತಿ ಸಾವಿತ್ರಿಯವರು ಉಡುಪಿ ಬೈಲಕೆರೆ ದಿ। ಪುಟ್ಟಣ್ಣಯ್ಯ ಮತ್ತು ದಿ। ಲಕ್ಷ್ಮೀಯವರ ಪುತ್ರಿ. ಶ್ರೀ ಪಿ.ಬಾಲಕೃಷ್ಣ ಹಾಗೂ ಶ್ರೀಮತಿ ಸಾವಿತ್ರಿಯವರ ಮಕ್ಕಳಲ್ಲಿ ಪಿ.ರಾಜೇಶ್ ಬೆಂಗಳೂರಿನಲ್ಲಿ ಸಿವಿಲ್ ಇಂಜಿನಿಯರ್ ಆಗಿದ್ದು ಸ್ವಂತ ಉದ್ಯಮಿಯಾಗಿದ್ದಾರೆ. ಅವರ ಪತ್ನಿ ಶ್ರೀಮತಿ ಉಷಾ (ಬೈಲಕೆರೆ ನಾರಾಯಣ ಅವರ ಮಗಳು) ಇವರ ಮಕ್ಕಳು ರಾಕೇಶ್ ಹಾಗೂ ಕು. ರಕ್ಷಾ ಪಿ.ಬಾಲಕೃಷ್ಣ ರವರ ಮಗಳು ಸವಿತಾ ಅಳಿಯ ರಾಜೇಶ್ ರಾವ್ ಮೂಲತಃ ಕುಕ್ಕೇಹಳ್ಳಿಯವರು ಪೂನಾದಲ್ಲಿ ಹೋಟೆಲ್ ಉದ್ಯಮಿಯಾಗಿದ್ದು, ಅವರಿಗೆ ಅನಿ ಹಾಗೂ ಅನುಷಾ ಎಂಬ ಇಬ್ಬರು ಮಕ್ಕಳಿದ್ದಾರೆ. ಬೆಂಗಳೂರಿನ ನಮ್ಮ ಸಂಘದ ಸಕ್ರಿಯ ಸದಸ್ಯರಾದ ಪಿ.ಬಾಲಕೃಷ್ಣ ದಂಪತಿಗಳು ಶಾರದಾ ಪತ್ರಿಕೆಯ ಮಹಾಪೋಷಕರಾಗಿರುವುದು ನಮಗೆ ಹೆಮ್ಮೆಯ ವಿಷಯ. ಶ್ರೀ ಶಾರದಾ ಪತ್ರಿಕೆಯ ಅಭಿಮಾನಿಯಾಗಿದ್ದು ನಮ್ಮ ಸಂಘದ ಎಲ್ಲಾ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ನೀಡುತ್ತಿರುವ ಶ್ರೀ ಪಿ. ಬಾಲಕೃಷ್ಣರವರಿಗೆ ಸಂಘದ ಪರವಾಗಿ ಧನ್ಯವಾದಗಳು.

## ಫ್ರೆಂಡ್ಸ್ ಗ್ರೂಪ್ ಉಡುಪಿ ಇವರಿಂದ ರಕ್ತದಾನ ಶಿಬಿರ



ಸಮಾಜ ಸೇವೆಯನ್ನೇ ಧ್ಯೇಯವಾಗಿಟ್ಟುಕೊಂಡು ಪ್ರಾರಂಭವಾದ ಫ್ರೆಂಡ್ಸ್ ಗ್ರೂಪ್ ಉಡುಪಿ, ಇವರು ವರ್ಷಂಪ್ರತಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದಾರೆ. ಇವುಗಳಲ್ಲಿ ಅತೀ ಮುಖ್ಯವಾದದ್ದು ರಕ್ತದಾನ ಶಿಬಿರ. ಕಳೆದ ಹಲವಾರು ವರ್ಷಗಳಿಂದ ಉಡುಪಿ ಕುಂಜಿಬೆಟ್ಟಿನ ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನಲ್ಲಿ ಈ ಶಿಬಿರವನ್ನು ಏರ್ಪಡಿಸುತ್ತಾ ಬಂದಿದ್ದು, ಈ ವರ್ಷವೂ ಇದೇ ರೀತಿ ದಿನಾಂಕ 09.03.2019 ರಂದು ಬೆಳಿಗ್ಗೆ 9 ಗಂಟೆಗೆ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಈ ಕಾರ್ಯಕ್ರಮದಲ್ಲಿ ಶ್ರೀ ಯಶ್‌ಪಾಲ್ ಸುವರ್ಣ, ಉಡುಪಿ, ದಕ್ಷಿಣ ಕನ್ನಡ ಮೀನುಗಾರಿಕಾ ಫೆಡರೇಷನ್‌ನ ಅಧ್ಯಕ್ಷರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡುತ್ತಾ, ರಕ್ತದಾನದ ಮಹತ್ವವನ್ನು ತಿಳಿಸಿದರು.

ಫ್ರೆಂಡ್ಸ್ ಗ್ರೂಪ್‌ನ ಗೌರವಾಧ್ಯಕ್ಷರಾದ ಶ್ರೀ ವಸಂತರಾವ್ ಕರಂಬಳ್ಳಿ, ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯ ರಕ್ತದಾನ ನಿಧಿಯ ಮುಖ್ಯಸ್ಥೆ ಡಾ.ಶಮ್ಮಿ ಶಾಸ್ತ್ರಿ ಹಾಗೂ ಸಿಬ್ಬಂದಿ ವರ್ಗ ಮತ್ತು ನಮ್ಮ ಸ್ಥಾನಿಕ ಮಿತ್ರವೃಂದದ ಶ್ರೀಯುತರಾದ ವೈ.ಮೋಹನ ರಾವ್, ಪುತ್ತಿಗೆ ಸುಬ್ರಹ್ಮಣ್ಯರಾವ್, ಕುಕ್ಕಿಕಟ್ಟೆ ಉಮೇಶ್ ರಾವ್, ಕುಕ್ಕಿಕಟ್ಟೆ ಪ್ರವೀಣ್ ರಾವ್, ಉಂಡಾರು ಕೃಷ್ಣಾನಂದ ರಾವ್, ನಂದಳಿಕೆ ಉದಯಚಂದ್ರ ರಾವ್, ಬೆಳ್ಮಣ್ ಸುರೇಶ ಶ್ಯಾನುಭಾಗ್, ಪಕ್ಷಿಕೆರೆ ಭವಾನಿ ಶಂಕರ ರಾವ್, ಗಣೇಶ್ ರಾವ್ ಎಲ್ಲೂರು, ಧರ್ಮೇಂದ್ರ ಹೆಬ್ಬಾರ್ ಮಟ್ಟು, ದಿನೇಶ್ ರಾವ್ ಬೈಲಕೆರೆ, ಮಹೇಶ್ ರಾವ್ ಬೆಳಗಾಂ, ವಿಕೇಶ್ ರಾವ್ ಕರಂಬಳ್ಳಿ, ಮುರಳೀಕೃಷ್ಣ ಹೆಬ್ಬಾರ್ ಪರ್ಕಳ, ಶ್ರೀಮತಿ ಕಾವ್ಯಶ್ರೀ ವಿಕೇಶ್ ರಾವ್, ವಿಜೇತ ಮುರಳೀಕೃಷ್ಣ ಹೆಬ್ಬಾರ್, ಅಲ್ಲದೇ ಶ್ರೀ. ಎಮ್. ಫಾಲಚಂದ್ರ ರಾವ್ ದಂಪತಿಯವರು ಶುಭಕಾಮನೆಯನ್ನು ಕೋರಿರುವರು. ಹಾಗೆಯೇ ಸುಮಾರು 600ಕ್ಕೂ ಮಿಕ್ಕಿದ ದಾನಿಗಳು ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಶಿಬಿರದ ಯಶಸ್ಸಿಗೆ ಕಾರಣರಾಗಿದ್ದರು.

## ಬೆಳ್ತಂಗಡಿಯಲ್ಲಿ ಧನ್ವಂತರಿ ಹೋಮ



ತಾ.10.04.2019ರ ಬುಧವಾರ ಬೆಳಂಗಡಿ ಶ್ರೀಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ದ ವತಿಯಿಂದ ಧನ್ವಂತರೀ ಹೋಮ ಜರಗಿತು. ಅಧ್ಯಕ್ಷರಾದ ಶ್ರೀ ಬಿ.ಕೆ.ಧನಂಜಯ ಕುಮಾರ್ ಸಂಚಾಲಕ ಶ್ರೀ ಅರುಣ್ ಕುಮಾರ್ ರವರ ನೇತೃತ್ವದಲ್ಲಿ ಕಾರ್ಯಕ್ರಮಗಳು ನೆರವೇರಿದವು. 09.04.2019ರ ಸಂಜೆ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡು 10.04.2019ರಂದು ಮಧ್ಯಾಹ್ನ ಅನ್ನಸಂತರ್ಪಣೆಯೊಂದಿಗೆ ಕೊನೆಗೊಂಡವು. ಶ್ರೀ ಅಜೇಯ ಹೆಬ್ಬಾರ್‌ರವರು ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ನಾರಾವಿಯ ಶ್ರೀಮತಿ ಸರಸ್ವತಿ ಅಮ್ಮ ಹಾಗೂ ಮಕ್ಕಳು ಅನ್ನಸಂತರ್ಪಣೆಯನ್ನು ಪ್ರಾಯೋಜಿಸಿದ್ದರು. ಅದೇ ಸಂದರ್ಭದಲ್ಲಿ ಶ್ರೀಮತಿ ಸಂಜೀವಿ ಮತ್ತು ಶ್ರೀ ಪುಣಚ ಸುಬ್ಬರಾವ್ ಧರ್ಮಸ್ಥಳ ಇವರ ಸ್ಮರಣಾರ್ಥ ಭೋಜನ ಶಾಲೆಯ ಉದ್ಘಾಟನೆ ಶ್ರೀ ರಘುಚಂದ್ರ ರಾವ್ ಮತ್ತು ಸಹೋದರರಿಂದ ನೆರವೇರಿತು ಸಂಘದ ಅಧ್ಯಕ್ಷ ಶ್ರೀ ದಿನೇಶ್ ಕುಮಾರ್ ಎಂಎಸ್, ಕಾರ್ಯದರ್ಶಿ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

## ರ್‍ಯಾಂಕ್ ವಿದ್ಯಾರ್ಥಿಗೆ ಅಭಿನಂದನೆ



ಮಂಗಳೂರಿನ ಶಾರದ ಪಿ ಯು ಕಾಲೇಜಿನ ವಿದ್ಯಾರ್ಥಿಯಾದ ರೋಹನ್ ರಾವ್ ಹೆಚ್.ಜೆ. ಇವನು ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಷಯದಲ್ಲಿ ಕರ್ನಾಟಕ ರಾಜ್ಯಕ್ಕೆ ಐದನೇ ರ್‍ಯಾಂಕ್ ಗಳಿಸಿರುತ್ತಾನೆ. ಇವನು ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿಯೂ ರಾಜ್ಯಕ್ಕೆ ಎರಡನೇ ರ್‍ಯಾಂಕ್ ಗಳಿಸಿದ್ದನು. ಇವನು ಹೊಸಕೋಟೆ ಜಗದೀಶರಾವ್ ಹಾಗೂ ಶ್ರೀಮತಿ ವಾಣಿ ದಂಪತಿಗಳ ಪುತ್ರ. ರೋಹನ್‌ರಾವ್‌ನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.


### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | |
|---|---|
| ವಾಹನ ಸಾಲ | : 12.5% |
| ಹಳೆಯ ವಾಹನ | : 14% |
| ಆಭರಣ ಸಾಲ | : 12.5% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



**With Best Compliments From :**

Land Trades™ BUILDERS & DEVELOPERS

UPGRADE TO A NEW LIFESTYLE

Premium Projects in Mangalore




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+



**With Best Compliments From :**

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org